13. ಗಮನ ಸೆಳೆಯುವ ಸೂಚನೆಗಳು.

(ಅ) ವಿಷಯ:– ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವ ಪಟ್ಟಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 13ನ್ನು ಸೇರಿಸದಿರುವ ಬಗ್ಗೆ.

ಶ್ರೀ ಶಿವಾನಂದ ಎಸ್.ಪಾಟೀಲ್(ತಿಕೋಟ): ಮಾನ್ಯ ಅಧ್ಯಕ್ಷರೆ, ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವ ಪಟ್ಟಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 13 ನ್ನು ಸೇರಿಸದಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹೆದ್ದಾರಿ ನಂ.13 ಸೊಲ್ಲಾಪುರ–ಚಿತ್ರದುರ್ಗ–ಶಿವಮೊಗ್ಗ–ಶೃಂಗೇರಿ–ಮಂಗಳೂರು ರಸ್ತೆಯು 749 ಕಿ.ಮೀ. ಉದ್ದವಿದ್ದು, ಕರ್ನಾಟಕ ರಾಜ್ಯದಲ್ಲಿ ಈ ರಾಷ್ಟ್ರೀಯ ಹೆದ್ದಾರಿಯು 719 ಕಿ.ಮೀ. ಉದ್ದವಿರುತ್ತದೆ. ವಿಜಾಪುರ–ಹೊಸಪೇಟೆ–ಚಿತ್ರದುರ್ಗ ಮಧ್ಯದ ರಾಷ್ಟ್ರೀಯ ಹೆದ್ದಾರಿಯು 390 ಕಿ.ಮೀ. ಉದ್ದವಿದ್ದು ಪ್ರಸ್ತುತದಲ್ಲಿ ಈ ಮಾರ್ಗದಲ್ಲಿ ಕಬ್ಬಿಣದ ಅದಿರು, ಸಿಮೆಂಟ್, ಉಕ್ಕು ಇತ್ಯಾದಿ ಭಾರ ಹೊತ್ತ ವಾಹನಗಳ ಸಾಂದ್ರತೆಯು ದಿನವೊಂದಕ್ಕೆ ಸುಮಾರು 39000 ವರೆಗೂ ಇರುತ್ತದೆ. ಅಲ್ಲದೆ ಈ ಮಾರ್ಗವು ರಾಷ್ಟ್ರೀಯ ಹೆದ್ದಾರಿ ನಂ.4 ಅನ್ನು ಚಿತ್ರದುರ್ಗದಲ್ಲಿ ಸಂದಿಸಿ, ಶಿವಮೊಗ್ಗ ಮುಖೇನ ಮಂಗಳೂರು ಬಂದರಿಗೆ ತಲುಪುತ್ತದೆ. ಮತ್ತು ಸೊಲ್ಲಾಪುರ–ವಿಜಾಪುರ–ಹೊಸಪೇಟೆ ಮುಖೇನ ಬೆಂಗಳೂರಿಗೆ ಬರುವ ಎಲ್ಲಾ ವಾಹನಗಳು ಈ ಮೂಲಕವೇ ಹಾದು ಹೋಗುತ್ತವೆ.

ಪ್ರಸ್ತುತದಲ್ಲಿ ವಿಜಾಪುರದಿಂದ ಚಿತ್ರದುರ್ಗದವರೆಗೆ ಎರಡು ಪಥಗಳ ರಸ್ತೆ ಇದ್ದು ಈ ಹೆಚ್ಚಿನ ವಾಹನ ಸಾಂದ್ರತೆ ಮತ್ತು ಅತಿ ಭಾರ ಹೊರುವ ವಾಹನ ದಟ್ಟಣೆಯಿಂದಾಗಿ ಈ ಮಾರ್ಗದಲ್ಲಿ ವಾಹನ ಸಂಚಾರ ಸುಗಮವಾಗಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ವಾಹನ ದಟ್ಟಣೆ ಮತ್ತು ಅತಿ ಭಾರದ ವಾಹನಗಳಿಂದಾಗಿ ರಸ್ತೆಯ ಸ್ಥಿತಿ ಕೂಡ ಮೇಲಿಂದ ಮೇಲೆ ಹದಗೆಡುತ್ತಿದೆ. ಈ ಕಾರಣದಿಂದ ಈ ಮಾರ್ಗವನ್ನು ನಾಲ್ಕು ಪಥಗಳ ಮಾರ್ಗವಾಗಿ ಪರಿವರ್ತಿಸುವುದು ಅವಶ್ಯವಿದ್ದು ಈ ಮಾರ್ಗವನ್ನು ಮೇಲ್ದರ್ಜೆಗೇರಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ನೌಕಾಯಾನ, ಭೂ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವಾಲಯಕ್ಕೆ

2002ನೇ ಇಸವಿಯಿಂದಲೂ ಪ್ರಸ್ತಾವನೆಯನ್ನು ಸಲ್ಲಿಸಿ ಒತ್ತಾಯಿಸುತ್ತಾ ಬರುತ್ತಿದೆ.

ಇದಲ್ಲದೆ, ಈ ಭಾಗವನ್ನು ಪ್ರತಿನಿಧಿಸುವ ಶಾಸಕರುಗಳು ಹಾಗೂ ಇತರೆ ಜನಪ್ರತಿನಿಧಿಗಳು ಬೆಂಗಳೂರನ್ನು ತಲುಪಲು ಈ ಮಾರ್ಗವನ್ನೆ ಅವಲಂಬಿಸಿದ್ದು, ಅಧಿಕ ವಾಹನ ಸಾಂದ್ರತೆ ಹಿನ್ನೆಲೆಯಲ್ಲಿ ಈ ಮಾರ್ಗವನ್ನು ಕೂಡಲೆ ನಾಲ್ಕು ಪಥಗಳ ಹೆದ್ದಾರಿಯಾಗಿ ಪರಿವರ್ತಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನು ಒತ್ತಾಯಿಸುತ್ತಿದ್ದಾರೆ. ವಿಜಾಪುರದಿಂದ ಬೆಂಗಳೂರಿಗೆ ನೇರ ರೈಲು ಸಂಪರ್ಕ ಇಲ್ಲದ ಪ್ರಯುಕ್ತ ಈ ಭಾಗದ ಜನರು ಈ ರಾಷ್ಟ್ರೀಯ ಹೆದ್ದಾರಿ 13 ಅನ್ನು ಬೆಂಗಳೂರು ತಲುಪಲು ಅವಲಂಬಿಸಿದ್ದಾರೆ. ಈ ಬೇಡಿಕೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಪದೇ ಪದೇ ವಿಜಾಪುರ–ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿ–13ನ್ನು ನಾಲ್ಕು ಪಥಗಳ ಮಾರ್ಗವಾಗಿ ಪರಿವರ್ತಿಸಲು ಒತಾಯಿಸುತ್ತಿದೆ. ಅಲ್ಲದೆ, ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಮತ್ತು ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು, ಕೇಂದ್ರ ಸರ್ಕಾರದ ಮಾನ್ಯ ನೌಕಾಯಾನ, ಭೂ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವರಿಗೆ ಮತ್ತು ರಾಜ್ಯ ಸಚಿವರಿಗೆ ಮೇಲಿಂದ ಮೇಲೆ ಪತ್ರ ವ್ಯವಹಾರ ನಡೆಸಿ ಒತ್ತಾಯಿಸಿದ್ದಾರೆ.

ಕೇಂದ್ರ ಸರ್ಕಾರದೊಂದಿಗೆ ರಾಜ್ಯ ಸರ್ಕಾರ ನಡೆಸಿರುವ ಪತ್ರ ವ್ಯವಹಾರದ ವಿವರಗಳು ಈ ಕೆಳಕಂಡಂತಿವೆ.

1) ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಅವರ ಪತ್ರ ಸಂಖ್ಯೆ: CNH/TA-1/AEE/BOT/03-04/19.3.03.

2) ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಅವರ ಪತ್ರ ಸಂಖ್ಯೆ:CE/NH/TA-1/AEE/BOT/02-03/24.3.03.

3) ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಅವರ ಪತ್ರ ಸಂಖ್ಯೆ:CNH/TA-3/AE6/NH13/UPG/04-05/9.8.04.

4) ಮಾನ್ಯ ಲೋಕೋಪಯೋಗಿ ಸಚಿವರ ಪ್ರಸ್ತಾವನೆ ದಿನಾಂಕ:27.9.04.

5) ಮಾನ್ಯ ಮುಖ್ಯಮಂತ್ರಿಗಳ ಪ್ರಸ್ತಾವನೆ ಸಂಖ್ಯೆ: 441/GC-1/04/15.10.04.

6) ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಅವರ ಪತ್ರ ಸಂಖ್ಯೆ:PW/170/CNH/04/06.12.04.

7) ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಅವರ ಪತ್ರ ಸಂಖ್ಯೆ:PW/186/CNH/04/21.12.04.

8) ಮಾನ್ಯ ಲೋಕೋಪಯೋಗಿ ಸಚಿವರ ಪ್ರಸ್ತಾವನೆ ದಿನಾಂಕ: 11.06.05.

ಇತ್ತೀಚೆಗೆ ಚೈನದಿಂದ ಕಬ್ಬಿಣದ ಅದಿರಿಗೆ ಬೇಡಿಕೆ ಹೆಚ್ಚಿರುವ ಹಿನ್ನೆಲೆಯಲ್ಲಿ ಪ್ರತಿ ವರ್ಷ ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸಾಂದ್ರತೆ ಗಣನೀಯವಾಗಿ ಹೆಚ್ಚಿದೆ. ಕೇಂದ್ರ ಸರ್ಕಾರದ ನೌಕಾಯಾನ, ಭೂ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವರು ಈ ಹಿಂದೆ ಅಂದರೆ ದಿನಾಂಕ 27.09.2004 ರಂದು ಬೆಂಗಳೂರಿನ ವಿಧಾನಸೌಧದಲ್ಲಿ ನಡೆಸಿದ ಸಭೆಯಲ್ಲಿ ಈ ರಾಷ್ಟ್ರೀಯ ಹೆದ್ದಾರಿಯನ್ನು ಒಳಗೊಂಡಂತೆ ರಾಜ್ಯದ ಇತರೆ ರಾಷ್ಟ್ರೀಯ ಹೆದ್ದಾರಿಗಳನ್ನು ನಾಲ್ಕು 'ಪಥಗಳ ಹೆದ್ದಾರಿಯಾಗಿ ಪರಿವರ್ತಿಸಲು ಪ್ರಸ್ತಾವನೆಗಳನ್ನು ಮಂಡಿಸಿ, ಅನುಮೋದನೆ ನೀಡಬೇಕೆಂದು ಕೋರಲಾಯಿತು, ಆದರೆ, ಅಂದಿನ ವಾಹನ ಸಾಂದ್ರತೆಯು 22 ಸಾವಿರದಿಂದ 30 ಸಾವಿರ ಇದ್ದ ಪ್ರಯುಕ್ತ ಈ ಪ್ರಸ್ತಾವನೆಯನ್ನು ಮುಂದಿನ ವರ್ಷಗಳಲ್ಲಿ ಪರಿಗಣಿಸಲಾಲಗುವುದೆಂದು ಕೇಂದ್ರ ಸಚಿವರು ತಿಳಿಸಿದರು.

ಇದಲ್ಲದೆ ದಿನಾಂಕ 11.06.2005 ರಂದು ಕೇಂದ್ರ ನೌಕಾಯಾನ, ಭೂ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವರು ಬೆಳಗಾಂನಲ್ಲಿ ರಾಷ್ಟ್ರೀಯ ಹೆದ್ದಾರಿ 4–ಬೆಳಗಾಂ –ಸಂಕೇಶ್ವರ ಗಡಿಯವರೆಗೆ ಪರಿವರ್ತಿಸಿ ನಿರ್ಮಿಸಲಾಗಿರುವ ನಾಲ್ಕು ಪಥಗಳ ಹೆದ್ದಾರಿಯನ್ನು ರಾಷ್ಟ್ರಕ್ಕೆ ಸಮರ್ಪಿಸುವ ಸಮಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರ ಕೋರಿಕೆ ಮೇರೆಗೆ, ಪ್ರಥಮ ಹಂತದಲ್ಲಿ ಹೊಸಪೇಟೆ–ಚಿತ್ರದುರ್ಗ ನಡುವಿನ 130 ಕಿ.ಮೀ. ಉದ್ದದ ಮಾರ್ಗವನ್ನು ನಾಲ್ಕು ಪಥದ ಹೆದ್ದಾರಿಯಾಗಿ ಪರಿವರ್ತಿಸಲು BOT ಆಧಾರದ ಮೇಲೆ NHAI ಮುಖೇನ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ಈ ಭರವಸೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಈ ಪ್ರಸ್ತಾವನೆಯನ್ನು ಕಾರ್ಯಗತಗೊಳಿಸಲು ಸರ್ವ ಪ್ರಯತ್ನ ನಡೆಸುವುದು.

ಶ್ರೀ ಶಿವಾನಂದ ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಹಿಂದೆ ಸನ್ಮಾನ್ಯ ಸಚಿವರು ಇದೇ ಪ್ರಶ್ನೆಗೆ ಆಗಸ್ಟ್‌ನಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಈ ಉತ್ತರಕ್ಕೆ ಮತ್ತು ಆ ಉತ್ತರಕ್ಕೆ ವ್ಯತ್ಯಾಸ ನನಗೆ ಕಾಣುತ್ತಿಲ್ಲ, ಇದರಲ್ಲಿ ಪತ್ರ ವ್ಯವಹಾರ ಮಾಡಿರುವಂತಹ ಮಾಹಿತಿ ಇದೆ. ಕೊನೆಗೆ ಒಂದು ವಿಚಾರವನ್ನು ಅವರು ಹೇಳಿದ್ದಾರೆ ಅದೇನೆಂದರೆ, ಭವಿಷ್ಯದ ನಿರ್ಮಾಣದಲ್ಲಿ ಬಿ.ಒ.ಟಿ. ಆಧಾರದ ಮೇಲೆ ತೆಗೆದುಕೊಳ್ಳುತ್ತೇವೆ. Build, operate and transfer system ಮೇಲೆ ನಾವು ವಹಿಸಿಕೊಡುತ್ತೇವೆ. ಅದು ಎಲ್ಲಿಂದ ಅಂದರೆ ಹೊಸಪೇಟೆಯಿಂದ ಚಿತ್ರದುರ್ಗದವರೆಗೆ ಮಾತ್ರ. ನಾವು ಅವರನ್ನು ಕೇಳಿರುವುದು ಬಿಜಾಪುರದಿಂದ ಚಿತ್ರದುರ್ಗದವರೆಗೆ ರಸ್ತೆಯನ್ನು ಸಂಪೂರ್ಣ 316 ಕಿ.ಮೀ. ನಾವು ನಾಲ್ಕು ಪಥಗಳ ರಸ್ತೆಯನ್ನಾಗಿ ಮಾಡಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟಿದ್ದೇವೆ. ಇದು ನನ್ನದೊಂದೇ ಬೇಡಿಕೆಯಲ್ಲ, ಇಡೀ ಉತ್ತರಕರ್ನಾಟಕದಲ್ಲಿ ಬರತಕ್ಕಂತಹ ಬಹುತೇಕ ಶಾಸಕರ ಬೇಡಿಕೆಯಾಗಿರುವುದು. ಮಾನ್ಯ ಸಚಿವರು ಮೊನ್ನೆ ಜನವರಿಯಲ್ಲಿ ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದೀರಿ, ಬೆಂಗಳೂರು ಮತ್ತು ಹಾಸನವನ್ನು 620 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 157 ಕಿ.ಮಿ.ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಮಾಡುತ್ತಿದ್ದೀರಿ. ಅದೇ ತರಹ ಉಡುಪಿ ಮತ್ತು ಕುಂದಾಪುರದಲ್ಲಿ ಬರತಕ್ಕಂತಹ ರಸ್ತೆಯನ್ನು 400 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ತಾವು ಕೈಗೆತ್ತಿಕೊಳ್ಳುತ್ತಿದ್ದೀರಿ. ಇದಕ್ಕೆ ತಾವು ಏನು ಪ್ರಾಧಾನ್ಯತೆಯನ್ನು ಕೊಡಬೇಕಾಗಿತ್ತು, ಟ್ರಾಫಿಕ್ ಇಂಟೆನ್‌ಸಿಟಿಯನ್ನು ನೋಡಿ ಆ ಪ್ರಾಧಾನ್ಯತೆಯನ್ನು ಇದುವರೆವಿಗೂ ಇಲಾಖೆಯವರು ಕೊಡುತ್ತಿಲ್ಲ. ತಾವು ತತಕ್ಷಣ, ಯಾವುದೇ ರಸ್ತೆಯನ್ನು ಕೈಬಿಡಿ ಎಂದು ನಾವು ಹೇಳುವುದಿಲ್ಲ. ಅವುಗಳಿಗೆ ಕೊಡತಕ್ಕಂತಹ ಪ್ರಾಧಾನ್ಯತೆಯನ್ನು ಕೊಡಿ. ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕಕ್ಕೆ ಬರತಕ್ಕಂತಹ ಈ ರಸ್ತೆಯು ಬಹುಮುಖ್ಯ ರಸ್ತೆಯಾಗಿರುವುದರಿಂದ ಈ ವರ್ಷದಲ್ಲಿ ತಾವು ಏನಾದರೂ ಕೈಗೆತ್ತಿಕೊಳ್ಳುವಂತಹ ಪ್ರಯತ್ನ ತಮ್ಮಿಂದ ಆಗುತ್ತದೆಯೇ ಎಂದು ತಮ್ಮ ಮೂಲಕ ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಸವರಾಜರಾಯರೆಡ್ಡಿ(ಯಲ್ಬುರ್ಗಾ): ಮಾನ್ಯ ಸಭಾಧ್ಯಕ್ಷರೆ, ನಾನೂ ಒಬ್ಬ ಸಿಗ್ನೇಟರಿ. ಸನ್ಮಾನ್ಯ ಲೋಕೋಪಯೋಗಿ ಸಚಿವರು ರಾಷ್ಟ್ರೀಯ ಹೆದ್ದಾರಿ-13 ಸೊಲ್ಲಾಪುರ-ಚಿತ್ರದುರ್ಗ-ಮಂಗಳೂರು ರಸ್ತೆ, ಏನು ಇದೆ, ಸೊಲ್ಲಾಪುರದಿಂದ ಚಿತ್ರದುರ್ಗದವರೆಗೆ ನಾಲ್ಕು ಪಥದ ರಸ್ತೆಯನ್ನಾಗಿ ಪರಿವರ್ತನೆ ಮಾಡುವುದರ ಸಲುವಾಗಿ ಹಲವಾರು ಸಾರಿ ಒತ್ತಾಯವನ್ನು ಆ

ಭಾಗದ ಶಾಸಕರು ಸಂಸತ್ ಸದಸ್ಯರು ಬಹಳಷ್ಟು ಒತ್ತಾಯವನ್ನು ಮಾಡಿದ್ದಾರೆ ಎನ್ನುವಂತಹ ಮಾತನ್ನು ಲೋಕೋಪಯೋಗಿ ಸಚಿವರು ಹೇಳಿದ್ದಾರೆ.

SRI J.C.MADHUSWAMY:- Sir, I am on a Point of Order. ಅವರು ಸಿಗ್ನೆಟರಿ ಇದ್ದಾರರೆನ್ನುತ್ತಾರೆ, ನೀವು ಅಜೆಂಡಾದಲ್ಲಿ ಅವರ ಹೆಸರನ್ನು ಹಾಕಿರುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಒಂದು ನಿಮಿಷ...

SRI J.C.MADHUSWAMY:- No, no, It has to be clarified before the House.

ಶ್ರೀ ಬಸವರಾಜ ರಾಯರೆಡ್ಡಿ: ಒಂದು ನಿಮಿಷ ರೀ..

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿದ್ದೇನೆ. ಅಜೆಂಡಾದಲ್ಲಿ ಸಿಗ್ನೆಟರಿ ಆದಮೇಲೆ ನಮಗೆ ಏತಕ್ಕಾಗಿ ಹೇಳಲಿಲ್ಲ? ಎಂದು ನಾವು ನಿಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಶಿವಾನಂದ ಎಸ್ ಪಾಟೀಲ್: ಅಜೆಂಡಾದಲ್ಲಿ ಫಿಗರ್ ಆಗಿರಲಿಕ್ಕಿಲ್ಲ. ಆಮೇಲೆ 7–8 ಜನ.....

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಪಾಯಿಂಟ್ ಆಫ್ ಆರ್ಡರ್ ಅನ್ನು ಅಧ್ಯಕ್ಷರಿಗೆ ಕೇಳಿದ್ದೇನೆ.

ಅಧ್ಯಕ್ಷರು: ಈಗ ರಾಯರೆಡ್ಡಿಯವರು ಸಿಗ್ನೆಟರಿ ಅಲ್ಲ,

ಶ್ರೀ ಜೆ.ಸಿ. ಮಾಧುಸ್ವಾಮಿ: ಸನ್ಮಾನ್ಯ ಅಧ್ಯಕ್ಷರೇ, .Then how can he say before the House, I am the signatory ಎಂದು ಭಾಷಣ ಪ್ರಾರಂಭಿಸುತ್ತಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ: ನನಗೆ ಅವಕಾಶ ಕೊಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವಕಾಶ ಕೊಡಿ ಎಂದು ಕೇಳಿ, How can he state before the House, ನಮ್ಮ ಎದುರಿಗೆ ನಿಂತು ಹೇಳುತ್ತಿದ್ದಾರೆ, ಇದಕ್ಕೆ ವಿವರಣೆಯನ್ನು ಕೊಡಬೇಕು.

ಶ್ರೀ ಬಸವರಾಜ ರಾಯರೆಡ್ಡಿ: ನಾನು ಸಿಗ್ನೇಚರ್ ಮಾಡಿ ನಿಮ್ಮ ಕೈಗೆ ಕೊಟ್ಟಿದ್ದೇನೆ. ಒಂದು ನಿಮಿಷ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವು ಹಿರಿಯ ಸದಸ್ಯರು, ಮಂತ್ರಿಗಳಾಗಿದ್ದವರು, ನಮಗೆಲ್ಲಾ ಆಗಾಗ ಗೈಡ್ ಮಾಡುವವರು, ಕಾನೂನು

ಹೇಳಿಕೊಡುವವರು, ಸದನಕ್ಕೆ ಬಹಳ ಗೈಡ್ ಮಾಡುವ ಮನುಷ್ಯರು ನೀವು, ನೀವೆ ಹೀಗೆ ಹೇಳಿದರೆ ಹೇಗೆ?

ಶ್ರೀ ಬಸವರಾಜ ರಾಯರೆಡ್ಡಿ: ನಾನು ಸಬ್ಮಿಟ್ ಮಾಡಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ(ಬಾಗೇಪಲ್ಲಿ): ನೀವು ಸಬ್ಮಿಟ್ ಮಾಡಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಮಗೆ ಅದು ಸಂಬಂಧವಿಲ್ಲ. It is not in the agenda Sir.

ಅಧ್ಯಕ್ಷರು: ಈಗ ಹಿಂದೆ ಬಹಳ ಜನ ಕೊಟ್ಟಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನೀವು ಅವಕಾಶ ಕೊಡುವುದು ನಿಮಗೆ ಬಿಟ್ಟಿದ್ದು. ಕಾಲಿಂಗ್ ಅಟೆನ್‌ಷನ್‌ನಲ್ಲಿ ನೀವು ಸಿಗ್ನೆಚರ್ಸ್ ಇಲ್ಲದವರನ್ನೆಲ್ಲಾ ಕರೆಯಲಿಕ್ಕೆ ಆರಂಭಿಸಿದರೆ ನಾವೂ ಸಹ ಏಳುತ್ತೇವೆ.

ಅಧ್ಯಕ್ಷರು: ಮಾಧುಸ್ವಾಮಿಯವರೆ, ಸಿಗ್ನೆಟರಿ ಎಂದು ಹೇಳಿದ ಮೇಲೆ ನಾವು ನೋಡಬೇಕಾಯಿತು. ಅವರು ಸಿಗ್ನೆಟರಿ ಅಲ್ಲ, ರಾಯರೆಡ್ಡಿಯವರು ದಯಮಾಡಿ ಕೂರಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ಅವರು ತಮ್ಮ ಎದುರಿಗೆ ನಾನು ಸಿಗ್ನೆಟರಿ ಎಂದು ಹೇಳಿದ್ದಾರೆ, He has stated before the House that he is a signatory. ಅವರು ಸುಮ್ಮನೆ ಮಾತನಾಡಿದ್ದರೆ ನಾವು ಕೇಳುತ್ತಿರಲಿಲ್ಲ. ಅವರು ಹೇಳುತ್ತಿದ್ದಾರೆ, ನೀವು ಅಧ್ಯಕ್ಷರು ಸುಮ್ಮನೆ ಕುಳಿತಿದ್ದೀರಿ.

ಅಧ್ಯಕ್ಷರು: ಇಲ್ಲ ಅವರು ಸಿಗ್ನೆಟರಿ ಅಲ್ಲ, ಈಗ ನಿಯಮ 73 ರಡಿಯಲ್ಲಿ ಶಿವಾನಂದ ಪಾಟೀಲ್ ಒಬ್ಬರೇ ಕೇಳಿದ್ದಾರೆ, ಅನಂತರ ಕೆಲವು ಸದಸ್ಯರು ಏನು ಮಾಡಿದ್ದಾರೆಂದರೆ ಅವರು ಸುಮ್ಮನೆ ಈ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 13 ಅನ್ನು ಸೇರಿಸದಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರೊಂದಿಗೆ ಚರ್ಚಿಸಲು ಕಾಲಾವಕಾಶವನ್ನು ಮಾಡಿಕೊಡಲು ಕೋರುತ್ತೇವೆಂದು ಕೊಟ್ಟಿದ್ದಾರೆ. ಅದರಲ್ಲಿಯೂ ಸಹ ಅವರ ಹೆಸರಿಲ್ಲ. ಅವರ ಹೆಸರನ್ನು ಟೈಪ್ ಮಾಡಿದ್ದಾರೆ, ಅವರ ಸಹಿ ಇಲ್ಲ, ಅದರಲ್ಲಿ ಗವಿಯಪ್ಪ, ನಾಡಗೌಡ, ಅಪ್ಪಾ ಸಾಹೇಬ ಎಂದು ಬೇರೆಯವರು ಸಹಿ ಹಾಕಿದ್ದಾರೆ. But it is not in the form. ಆಮೇಲೆ ಇವರ ಪರವಾಗಿ ಏನೂ ಇದ್ದ ಹಾಗಿಲ್ಲ. ರಾಯರೆಡ್ಡಿರವರೇ, ನೀವು ತಪ್ಪು ಮಾತನಾಡುತ್ತಿದ್ದೀರಿ, ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ಅವರು ಸಿಗ್ನೆಟರಿ ಎಂದು ಹೇಗೆ ಹೇಳುತ್ತಿದ್ದಾರೆ?

ಶ್ರೀ ಬಸವರಾಜ ರಾಯರೆಡ್ಡಿ: ನಾನು ರೆಡಿ ಮಾಡಿಕೊಟ್ಟಿದ್ದೇನೆ. ಅವರು ಸಬ್ಮಿಟ್ ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ನೀವು ಅಜೆಂಡಾದಲ್ಲಿ ನೋಡಲಿಲ್ಲವೇ?

ಶ್ರೀ ಬಸವರಾಜ ರಾಯರೆಡ್ಡಿ: ನಾನು ನೋಡಿದ್ದೇನೆ.

(ಗೊಂದಲ)

ಅಧ್ಯಕ್ಷರು: ಆಯಿತು, ರಾಯರೆಡ್ಡಿಯವರೇ, ನೀವು ಸಿಗ್ನೇಟರಿ ಅಲ್ಲ ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಅಜೆಂಡಾದಲ್ಲಿ ನಿಮ್ಮ ಹೆಸರಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಆಯಿತು, ಹಾಗಾದರೆ ನಾನು ಮಾತನಾಡಲೇಬಾರದೇ? ಮಾತಾಡಬಾರದೆಂದೇನೂ ಇಲ್ಲವಲ್ಲಾ?

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ನೀವು ಸದನಕ್ಕೆ ಸುಳ್ಳು ಹೇಳುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು: ಆಯಿತು, ಇದನ್ನು ಇಲ್ಲಿಗೆ ಕ್ಲೋಸ್ ಮಾಡೋಣ.

(ಗೊಂದಲ)

Sri Basvaraja Rayareddy :- It is not my fault,ಣ.ಉತ್ತರ ಕರ್ನಾಟಕದ ಬಗ್ಗೆ ಮಾತನಾಡಲಿಕ್ಕೆ ಇವರು ನನಗೆ ಅವಕಾಶ ಕೊಡುತ್ತಿಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ನಮಗೂ ಉತ್ತರಕರ್ನಾಟಕದ ಬಗ್ಗೆ ಗೌರವವಿದೆ, ನಾವೂ ಮಾತನಾಡುತ್ತೇವೆ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಉತ್ತರ ಕರ್ನಾಟಕದ ಬಗ್ಗೆ ನಾವೂ ಸಹ ಮಾತನಾಡುತ್ತೇವೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರು ನೀವು ಉತ್ತರವನ್ನು ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಉತ್ತರವನ್ನು ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ನೀವು ಅಜೆಂಡಾವನ್ನು ನೋಡಲಿಲ್ಲವೆ? ನೀವು ಸುಳ್ಳು ಹೇಳುತ್ತಿದ್ದೀರಿ.

ಅಧ್ಯಕ್ಷರು: ಆಯಿತು ಬಿಡಿ, ಮುಂದೆ ಈ ರೀತಿ ಮಿಸ್ ರೆಪ್ರೆಸೆಂಟ್ ಮಾಡಬೇಡಿ.

ಶ್ರೀ ಬಸವರಾಜ ರಾಯರೆಡ್ಡಿ: ನಾನು ಸುಳ್ಳು ಹೇಳಲಿಲ್ಲ. ನಾನು ಸಿಗ್ನೆಚರ್ ಮಾಡಿದ್ದೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನೀವು ಸುಳ್ಳು ಹೇಳಿದಿರಿ ಅಜೆಂಡಾದಲ್ಲಿ ಸಿಗ್ನೆಚರ್ ಇಲ್ಲ.

ಮಾನ್ಯ ಸದಸ್ಯರು: ಸುಳ್ಳು ಎನ್ನುವುದು ಅನ್‌ಪಾರ್ಲಿಮೆಂಟರಿ ಪದ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸುಳ್ಳು ಪಾರ್ಲಿಮೆಂಟರಿ ಪದವೆಂದು ಮಾನ್ಯ ಎಸ್.ಎಂ. ಕೃಷ್ಣ ಅವರ ಕಾಲದಲ್ಲಿ ಆಗಿದೆ ಸರ್.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನೀವು ಹೇಳಿರುವುದು ಸತ್ಯಕ್ಕೆ ದೂರವಾದುದು.

ಅಧ್ಯಕ್ಷರು: ಆಯಿತು ಬಿಡಿ. ಅವರು ಸಿಗ್ನೆಟರಿ ಅಲ್ಲವೆಂದು ನಾನು ಹೇಳಿದ್ದೇನೆ. ಆದ್ದರಿಂದ ರಾಯರೆಡ್ಡಿಯವರಿಗೆ ಕುಳಿತುಕೊಳ್ಳಲು ಹೇಳಿದ್ದೇನೆ.

(ಗೊಂದಲ)

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ನೋಡಿ, ಅದು ಬೇರೆ ವಿಚಾರ. ನೀವು ನಮ್ಮನ್ನು ಉತ್ತರಕರ್ನಾಟಕದ ವಿರೋಧಿಗಳೆಂದು ಹೇಗೆ ಹೇಳುತ್ತಿದ್ದೀರಿ You should not utter like that. ಈ ರೀತಿ ನಾವು ಪ್ರಶ್ನೆ ಮಾಡಿದ ತಕ್ಷಣ ನೀವು ಉತ್ತರಕರ್ನಾಟಕಕ್ಕೆ ವಿರೋಧಿಗಳೆಂದು ನಿಮಗೆ ಮಾತನಾಡಲಿಕ್ಕೆ ಬಿಡುವುದಿಲ್ಲವೆಂದು ಹೇಳಿದರೆ ನಾವೇನು ಕರ್ನಾಟಕದವರಲ್ಲವೇ?

ಶ್ರೀ ಎಸ್.ಎಲ್. ಧರ್ಮೇಗೌಡ: ಸಭಾಧ್ಯಕ್ಷರೆ, ಇನ್ನುಮೇಲೆ ಆ ಚೇರ್‌ಗೆ ಸಭಾಧ್ಯಕ್ಷರೇ ಮಾತನಾಡುವಂತೆ ಮಾಡಿ, ಅದು ಬಿಟ್ಟು ಅವರವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಡಿ.

ಶ್ರೀ ಬಸವರಾಜ ರಾಯರೆಡ್ಡಿ: ನಾನು ಸಹಿ ಮಾಡಿ ಕೊಟ್ಟಿದ್ದೇನೆ. ಅದನ್ನು ಸಬ್ಮಿಟ್‌ಮಾಡಿರಲಿಕ್ಕಿಲ್ಲ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ನೋಡಿ, ಅಜೆಂಡಾದಲ್ಲಿ ನಿಮ್ಮ ಸಿಗ್ನೆಚರ್ ಇಲ್ಲ. ಕಾಲಿಂಗ್ ಅಟೆನ್ಷನ್‌ಗೆ ಸಿಗ್ನೆಟರೀಸ್‌ಗೆ ಮಾತ್ರ ಅವಕಾಶವಿರುತ್ತದೆ. ಸಿಗ್ನೆಟರೀಸ್ ಅಲ್ಲದಿದ್ದವರಿಗೆ ಅವಕಾಶವಿಲ್ಲ.

Sri Basvaraja Rayareddy: Chair can decide, ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಮಾತನಾಡಬಹುದು.

ಅಧ್ಯಕ್ಷರು: ರಾಯರೆಡ್ಡಿಯವರೇ ನೀವು ಸಿಗ್ನೆಟರಿ ಅಲ್ಲ, ದಯಮಾಡಿ ಕುಳಿತುಕೊಳ್ಳಬೇಕು. ಈಗ ಮಾನ್ಯ ಸಚಿವರು ಶಿವಾನಂದ ಪಾಟೀಲ್ ಅವರು ಕೇಳಿರುವ ಕ್ಲಾರಿಫಿಕೇಶನ್‌ಗೆ ನೀವು ಉತ್ತರಿಸಿ.

(ಗೊಂದಲ)

ಶ್ರಿ ಜೆ.ಸಿ.ಮಾಧುಸ್ವಾಮಿ: ನೀವು ಹೈದರಾಬಾದ್ ಕರ್ನಾಟಕದವರು, ಉತ್ತರಕರ್ನಾಟಕದವರಲ್ಲ. ಉತ್ತರಕರ್ನಾಟಕದವರು ಬೇರೆಯವರಿದ್ದಾರೆ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ನೀವು ನೋಟೀಸ್ ಕೊಟ್ಟು ಒಂದು ದಿವಸವೆಲ್ಲಾ ಚರ್ಚೆ ಮಾಡಿ, ನಾವು ಕುಳಿತು ಕೇಳುತ್ತೇವೆ. ಪ್ರತಿ ಸಲ ಎದ್ದು ಪಾಯಿಂಟ್ ಆಫ್ ಆರ್ಡರ್ ಹಾಕುತ್ತೀರಿ. ಆ ಪಾಯಿಂಟ್ ಆಫ್ ಆರ್ಡರ್‌ಗೆ ಅಧ್ಯಕ್ಷರು ಹೇಳಲಿ.

ಶ್ರೀ ಬಸವರಾಜ ರಾಯರೆಡ್ಡಿ: ಮಾಧುಸ್ವಾಮಿಯವರೇ ನನಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತಿಲ್ಲವಲ್ಲಾ, ದಯಮಾಡಿ ಕೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾನು ಅಧ್ಯಕ್ಷರನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು: ರಾಯರೆಡ್ಡಿಯವರೇ, ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಬಸವರಾಜ ರಾಯರೆಡ್ಡಿ: ನಾನು ಒಂದು ಎಕ್ಸ್‌ಪ್ಲನೇಷನ್ ಹೇಳುತ್ತೇನೆ.

ಅಧ್ಯಕ್ಷರು: ಈಗ ನೀವು ಕುಳಿತುಕೊಳ್ಳುವಿರಾ ಹೇಗೆ? ಎಲ್ಲಾ ಕೆಟ್ಟ ಸಂಪ್ರದಾಯಗಳನ್ನು ಮಾಡಿಕೊಂಡಿದ್ದೀರಿ, ನೀವೆಲ್ಲಾ ಹಿರಿಯ ಸದಸ್ಯರಾಗಿ ಬೇರೆಯವರಿಗೆ ಮಾರ್ಗದರ್ಶನ ಆಗಬೇಕು. ಅದು ಬಿಟ್ಟು ಮತ್ತೆ ಮತ್ತೆ ಹುಡುಗಾಟ ಆಯಿತು. ಈಗ ಮಾನ್ಯ ಸಚಿವರು ಉತ್ತರ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಈಗಾಗಲೇ ನಾವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಬೆಳಗಾಂಗೆ ಸಹ ಮಾನ್ಯ ಕೇಂದ್ರ ಭೂಸಾರಿಗೆ ಸಚಿವರು ಬಂದಾಗ, ಅವರು ಚಿತ್ರದುರ್ಗದಿಂದ ಬಿಜಾಪುರದವರೆಗೆ ಮತ್ತು ನಾವು ಈಗ ಮೊದಲನೇ ಹಂತದಲ್ಲಿ ಬಿಜಾಪುರದಿಂದ ಚಿತ್ರದುರ್ಗದಿಂದ ಹೊಸಪೇಟೆಯವರೆಗೆ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಎರಡನೇ ಹಂತದಲ್ಲಿ ಹೊಸಪೇಟೆಯಿಂದ ಬಿಜಾಪುರದವರೆಗೆ ತೆಗೆದುಕೊಳ್ಳುತ್ತೇವೆಂದು ಹೇಳಿ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಾವು ಕೇಳಿದ್ದೇವೆ. ಈಗಾಗಲೇ ಹೊಸಪೇಟೆಯಿಂದ ಚಿತ್ರದುರ್ಗದವರೆಗೆ ಸರ್ವೆ ಮಾಡಲಿಕ್ಕೆ ಅವರು ಅನುಮತಿಯನ್ನು ಕೊಟ್ಟಿದ್ದಾರೆ. ಬಿ.ಓ.ಟಿ. ಬೇಸಿಸ್ ಮೇಲೆ ಮಾಡಲಿಕ್ಕೆ ಎನ್.ಹೆಚ್. ಅಥಾರಿಟಿ ಕೊಟ್ಟಿದ್ದಾರೆ. ಮತ್ತೆ ಉಳಿದವನ್ನೂ ಸಹ ಈ ವರ್ಷದಲ್ಲಿ ಮಾಡುತ್ತೇವೆಂದು

ಕೇಂದ್ರ ಸರ್ಕಾರದ ಸಚಿವರು ತಿಳಿಸಿದ್ದಾರೆ. ಈ ರಸ್ತೆಯ ಅವಶ್ಯಕತೆಯಿದೆ ಆದ್ದರಿಂದ ಇದನ್ನು ಮಾಡಬೇಕೆಂದು ಮತ್ತೊಮ್ಮೆ ಕೇಂದ್ರ ಭೂಸಾರಿಗೆ ಸಚಿವರಿಗೆ ನಾನು ಹಾಗು ಮುಖ್ಯಮಂತ್ರಿಗಳೂ ಸಹ ಸರ್ಕಾರದ ವತಿಯಿಂದ ಪ್ರಾಮಾಣಿಕವಾಗಿ ಒತ್ತಾಯಿಸಲು ಪ್ರಯತ್ನಪಡುತ್ತೇವೆ.

ಶ್ರೀ ಶಿವಾನಂದ ಎಸ್.ಪಾಟೀಲ್: ಈ ವಿಚಾರ ಅವರಿಗೆ ಗೊತ್ತಿದೆ, ಪ್ರತಿ ದಿವಸ ಆ ರಸ್ತೆಯ ಮೇಲೆ 40 ರಿಂದ 60 ಸಾವಿರ ವಾಹನಗಳು ಓಡಾಡುತ್ತವೆ. ಈ ಟ್ರಾಫಿಕ್ ಇಂಟೆನ್ಸಿಟಿಯಲ್ಲಿ ಉತ್ತರಕರ್ನಾಟಕಕ್ಕೆ ಬ್ರಾಡ್‌ಗೇಜ್ ಇಲ್ಲ. ಏರ್‌ಸ್ಟ್ರಿಪ್ಟ್ ಇಲ್ಲ, ಇರುವುದೇ ಇದೊಂದೇ ನ್ಯಾಷನಲ್ ಹೈವೇ ಮಾತ್ರ ಇದೆ. ಅದಕ್ಕಾಗಿ ನಾವು ಅವರಲ್ಲಿ ಪದೇ ಪದೇ ರಿಕ್ವೆಸ್ಟ್ ಮಾಡುತ್ತಿದ್ದೇವೆ. ಬಿ.ಓ.ಟಿ.ಬೇಸಿಸ್ ಮೇಲೆ. ಬಿಜಾಪುರದಿಂದ ತಾವು ಪ್ರಾರಂಭ ಮಾಡಿದರೆ ಯಾರು ಬರಬೇಕು? ನೀವೆ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಈಗ ಟ್ರಾಫಿಕ್ ಸರ್ವೆ ಪ್ರಕಾರ ಬಿಜಾಪುರದಿಂದ ಹೊಸಪೇಟೆಯವರಿಗೆ 28 ಸಾವಿರ ಇದೆ, ಹೊಸಪೇಟೆಯಿಂದ ಚಿತ್ರದುರ್ಗದವರೆಗೆ 39 ಸಾವಿರ ಇದೆ. ಈಗ ನನ್ನ ಹತ್ತಿರ ಇರುವ ಮಾಹಿತಿ ನಮ್ಮ ಅಧಿಕಾರಿಗಳು ಕೊಟ್ಟಿರುವುದು, ಅದರ ಪ್ರಕಾರ ನಾನು ಉತ್ತರ ಕೊಡುತ್ತಿದ್ದೇನೆ. ಇದರ ಮೇಲೆ ಮುಂದಿನ ವರ್ಷ ಮಾಡಬೇಕಾಗುತ್ತದೆ, ಏಕೆಂದರೆ ಕಳೆದ ಸಾರಿ ಈ ಚರ್ಚೆ ಬಂದಂತಹ ಸಂದರ್ಭದಲ್ಲಿ 20–30 ಸಾವಿರ ಇತ್ತೆಂದು ಸಚಿವರು ತಿಳಿಸಿದ್ದರು. ಅವತ್ತು ನಾನು ಇರಲಿಲ್ಲ. ನಾನು ಇಲ್ಲದಿದ್ದ ಸಂದರ್ಭದಲ್ಲಿ.....

ಶ್ರೀ ಶಿವಾನಂದ ಎಸ್.ಪಾಟೀಲ್: ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ. ಹಾಸನ ಮತ್ತು ಬೆಂಗಳೂರಿನ ಬಗ್ಗೆ ತಾವು ಹೇಳಬೇಕು.

ಶ್ರೀ ಹೆಚ್.ಡಿ.ರೇವಣ್ಣ: ಅದನ್ನೂ ಹೇಳುತ್ತೇನೆ. ನೆಲಮಂಗಲ, ಹಾಸನ– ಮಂಗಳೂರಿಗೆ ಸರಾಸರಿ 43 ಸಾವಿರ ಇದೆ.

ಅಧ್ಯಕ್ಷರು: ಆಯಿತು ಈಗ ಮಾನ್ಯ ಈಶ್ವರಪ್ಪನವರು....

ಆ) ವಿಷಯ:–ಶಿವಮೊಗ್ಗ ನಗರಕ್ಕೆ 2ನೇ ಹಂತದ ಕುಡಿಯುವ ನೀರಿನ ಯೋಜನೆ ಜಾರಿಯಾಗದಿರುವ ಬಗ್ಗೆ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ನಗರಕ್ಕೆ 2ನೇ ಹಂತದ ಕುಡಿಯುವ ನೀರಿನ ಯೋಜನೆ ಜಾರಿಯಾಗದಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.